# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-37ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

**ದಿನಾಂಕ: 17.04.2021 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ.37 ಯಶವಂತಪುರ ವಾರ್ಡ್‌ನ, ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.37ರ ವಾರ್ಡ್ ಕಛೇರಿ, ಮಾಡೆಲ್ ಕಾಲೋನಿ, 2ನೇ ಅಡ್ಡರಸ್ತೆಯ ಕಟ್ಟಡದಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು**

**ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರು:-**

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಹುದ್ದೆ | ಪದನಾಮ | ಹಾಜರಾತಿ |
|---|---|---|---|---|
| 1 | ಶ್ರೀ ಎನ್. ಜಿ. ಉಮೇಶ್ | ಸ.ಕಾ.ನಿ.ಅ., | ಅಧ್ಯಕ್ಷರು/ ವಾರ್ಡ್ ನೋಡಲ್ ಅಧಿಕಾರಿ | ಹಾಜರಿದ್ದರು |
| 2 | ಎನ್. ಜಿ. ಉಮೇಶ್ | ಸಹಾಯಕ ಅಭಿಯಂತರರು | ಸದಸ್ಯರು | ಹಾಜರಿದ್ದರು |
| 3 | ಡಾ|| ಹರ್ಷಿತ್ | ಕೋವಿಡ್ ವೈದ್ಯಾಧಿಕಾರಿಗಳು | ಸದಸ್ಯರು | ಹಾಜರಿದ್ದರು |
| 4 | ಸುಜಾತಾ | ಹಿರಿಯ ಆರೋಗ್ಯ ಪರಿವೀಕ್ಷಕರು | ಸದಸ್ಯರು | ಹಾಜರಿದ್ದರು |
| 5 | ಗೋವಿಂದರಾಜು ಕೆ. | ಕಂದಾಯ ವಸೂಲಿಗಾರರು ಸ.ಕಂ.ಅ. (ಯಶವಂತಪುರ) | ಸದಸ್ಯರು | ಹಾಜರಿದ್ದರು |
| 6 | ಅನಿಲ್ ಕುಮಾರ್ ಎಂ. | ಸಹಾಯಕ ಅಭಿಯಂತರರು, ಬೆಸ್ಕಾಂ | ಸದಸ್ಯರು | ಹಾಜರಿದ್ದರು |
| 7 | ಚನ್ನೇಶಪ್ಪ | ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್‌ಎಸ್‌ಬಿ | ಸದಸ್ಯರು | ಹಾಜರಿದ್ದರು |
| 8 | ಸುಜಾತಾ | ಲಿಂಕ್ ವರ್ಕರ್ | ಸದಸ್ಯರು | ಹಾಜರಿದ್ದರು |
| 9 | ಸತ್ಯವತಿ | ಲಿಂಕ್ ವರ್ಕರ್ | ಸದಸ್ಯರು | ಹಾಜರಿದ್ದರು |
| 10 | ಶಿವಪ್ರಕಾಶ್ ಎಂ. | ಬಿ.ಎಲ್.ಓ. ಹೋಂ ಐಸೋಲೇಷನ್ ಟೀಂ | ಸದಸ್ಯರು | ಹಾಜರಿದ್ದರು |
| 11 | ಮುರಳಿ | ಮೇಲ್ವಿಚಾರಕರು | ಸದಸ್ಯರು | ಹಾಜರಿದ್ದರು |
| 12 | ಬಿ. ಜಾನ್ | ಮೇಲ್ವಿಚಾರಕರು | ಸದಸ್ಯರು | ಹಾಜರಿದ್ದರು |

ವಾರ್ಡ್-37ರ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಕಾರ್ಯದರ್ಶಿಯವರು ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯ ಮಾರ್ಗಸೂಚಿಗಳನ್ನು ಸಭೆಗೆ ಸ್ಥೂಲವಾಗಿ ವಿವರಿಸಿದರು.

ಮಾನ್ಯ ಅಧ್ಯಕ್ಷರು, ಸಭೆಯ ಸದಸ್ಯರುಗಳನ್ನು ಪರಸ್ಪರ ಪರಿಚಯ ಮಾಡಿಸಿ, ಮಾರ್ಗಸೂಚಿಯಂತೆ, ಈ ಕೆಳಗಿನ ವಿಷಯಗಳನ್ನು ಸಭೆಯ ಮುಂದಿಟ್ಟು ವಾರ್ಡ್ ಸಮಿತಿ ಸಭೆಯು ನಿರ್ವಹಿಸಬೇಕಾದ ಅಂಶಗಳನ್ನು ತಿಳಿಸಿ, ಅನುಸರಿಸಬೇಕಾದ ಕ್ರಮಗಳನ್ನು ಈ ಕೆಳಕಂಡಂತೆ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

1) ಆರೋಗ್ಯ :-

ಸಭೆಗೆ ಹಾಜರಿದ್ದ ವೈದ್ಯಾಧಿಕಾರಿಗಳಾದ ಹರ್ಷಿತ್ ರವರು ಮಾತನಾಡಿ, ಒಟ್ಟು ವಾರ್ಡ್‌ನಲ್ಲಿ 80% ಮೊದಲನೇ ಡೋಸ್ ಹಾಗೂ 10% ಎರಡನೇ ಡೋಸ್ ಲಸಿಕೆ ಶೇಕಡಾವಾರು ಲಸಿಕೆ ಮುಗಿದಿರುವುದಾಗಿ ಸಭೆಗೆ ತಿಳಿಸಿದರು. ವ್ಯಾಕ್ಸಿನ್ ಬಗ್ಗೆ ಜಾಗೃತಿ ಮೂಡಿಸಲು ವಾರ್ಡ್‌ನ ವ್ಯಾಪ್ತಿಯಲ್ಲಿ ಧ್ವನಿವರ್ಧಕ ಹಾಗೂ ಆಟೋ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗುತ್ತಿದೆ ಎಂದು ವೈದ್ಯಾಧಿಕಾರಿಗಳು ಸಭೆಯಲ್ಲಿ ಹೇಳಿದರು.

ವಾರ್ಡ್ ವ್ಯಾಪ್ತಿಯಲ್ಲಿ ಬ್ಲ್ಯಾಕ್‌ಸ್ಪಾಟ್ ಹಾಗೂ ನೀರು ನಿಲ್ಲುವ ಜಾಗಗಳನ್ನು ಗುರುತಿಸಿ ಸದರಿ ಜಾಗಗಳಿಗೆ ಫಾಗಿಂಗ್ ವ್ಯವಸ್ಥೆಯನ್ನು ಮಾಡಲು ಸೂಕ್ತ ಫಾಗಿಂಗ್ ಗುತ್ತಿಗೆದಾರರಿಗೆ ಕರೆ ಮಾಡಿ ಗುರುತಿಸಲ್ಪಟ್ಟ ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ವ್ಯವಸ್ಥಿತ ರೀತಿಯಲ್ಲಿ ಮೆಡಿಸನ್ ಹಾಕಿ ಫಾಗಿಂಗ್ ಮಾಡಲು ಗುತ್ತಿಗೆದಾರರಿಗೆ ತಿಳಿಸಿದರು.

ವಾರ್ಡ್‌ನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವಿಟಮಿನ್ ಸಿ, ವಿಟಮಿನ್ ಡಿ 3 ಹಾಗೂ ಝಿಂಕ್ ಔಷಧಿಯ ಕೊರತೆಯಿದ್ದು, ಔಷಧಿಯನ್ನು ಪೂರೈಸಲು ಆರೋಗ್ಯ ಇಲಾಖೆ ಗಮನ ಕೊಡದೇ ಇರುವುದು ಕಂಡುಬಂದಿದ್ದು, ಕ್ರಮವಹಿಸಲು ಸೂಚಿಸಲಾಯಿತು.

2) ಪೌರ ಕಾರ್ಮಿಕರ ಬಗ್ಗೆ:

ವಾರ್ಡ್‌ಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರಿಗೆ ಪ್ರತಿ ತಿಂಗಳು ಪೇಸ್ಲಿಪ್‌ನ್ನು ನೀಡಲು, ಪೇಪರ್‌ಗಳನ್ನು ನೀಡದ್ದರೂ ಸಹ ಪೇಸ್ಲಿಪ್‌ನ್ನು ನೀಡಿರುವುದಿಲ್ಲ. ಆದ್ದರಿಂದ ಪ್ರತಿ ತಿಂಗಳು ಪೇಸ್ಲಿಪ್‌ನ್ನು ನೀಡಲು ಹಿರಿಯ ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು ಅಧ್ಯಕ್ಷರಲ್ಲಿ ಕೋರಿದರು. ಹಾಗೂ ಸುನೀತಾ, ಪೌರ ಕಾರ್ಮಿಕರ ವೇತನ ಪಾವತಿಯಾಗಿರುವುದಿಲ್ಲ ಎಂದು ಕಿರಿಯ ಆರೋಗ್ಯ ಪರಿವೀಕ್ಷಕರು ಸಭೆಗೆ ತಿಳಿಸಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡಿ, ಸಂಬಂಧಪಟ್ಟ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘನತ್ಯಾಜ್ಯ) ರವರಿಗೆ ಕ್ರಮವಹಿಸಲು ಸೂಚಿಸುವುದಾಗಿ ತಿಳಿಸಿದರು.

3) ಬೀದಿ ಬದಿ ವ್ಯಾಪಾರಿಗಳ ತೆರವುಗೊಳಿಸುವ ಬಗ್ಗೆ:-

ಯಶವಂತಪುರ 1ನೇ ಮುಖ್ಯರಸ್ತೆ ಹಾಗೂ ಬಜಾರ್ ಸ್ಟ್ರೀಟ್ ರೋಡಲ್ಲಿ ಬೀದಿ ಬದಿ ವ್ಯಾಪಾರಿಗಳು ರಸ್ತೆ ಬದಿಯಲ್ಲಿ ತಮ್ಮ ತಳ್ಳುವ ಗಾಡಿಗಳನ್ನು ಇಟ್ಟು ವ್ಯಾಪಾರವನ್ನು ಮಾಡುತ್ತಿರುವುದರಿಂದ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿದ್ದು, ಕೂಡಲೇ ವ್ಯಾಪಾರಿಗಳನ್ನು ತೆರವುಗೊಳಿಸಲು ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು, ಆರೋಗ್ಯ ಪರಿವೀಕ್ಷಕರು, ಮೇಲ್ವಿಚಾರಕರು ಹಾಗೂ ಗ್ಯಾಂಗ್‌ಮ್ಯಾನ್‌ಗಳಿಗೆ ತಿಳಿಸಿದರು.

4) ಕಂದಾಯ ಇಲಾಖೆ:

ಸಭೆಗೆ ಹಾಜರಿದ್ದ ಕಂದಾಯ ವಸೂಲಿಗಾರರಾದ ಗೋವಿಂದರಾಜು ರವರು ಮಾತನಾಡಿ, ವಾರ್ಡ್‌ನಲ್ಲಿ ಬಹುತೇಕ ಸಂಖ್ಯೆಯಲ್ಲಿ ಕಂದಾಯವು ಬಾಕಿ ಇರುವುದು ಕಂಡುಬಂದಿರುವುದಾಗಿ ಸಭೆಗೆ ತಿಳಿಸಿದರು. ಕಂದಾಯ ಪಾವತಿಸದೇ ಬಾಕಿ ಉಳಿಸಿಕೊಂಡಿರುವ ಸಾರ್ವಜನಿಕರಿಗೆ ನೋಟೀಸ್‌ಗಳನ್ನು ನೀಡುವ

**5) ಬಿಡಬ್ಲ್ಯೂಎಸ್ಎಸ್ಬಿ :**

ವಾರ್ಡ್ ವ್ಯಾಪ್ತಿಯಲ್ಲಿ ಮ್ಯಾನ್‌ಹೋಲ್‌ಗಳ ಸುತ್ತ ಹೊಸ ರಿಂಗ್‌ಗಳನ್ನು ಅಳವಡಿಸುತ್ತಿರುವುದರಿಂದ, ಸದರಿ ಕಾರ್ಯ ಮಾಡುವ ಗುತ್ತಿಗೆದಾರರು ಎಲ್ಲಾ ಕಾಮಗಾರಿ ಪೂರ್ಣಗೊಂಡ ನಂತರ ಡೆಬ್ರಿಸ್‌ಗಳನ್ನು ರಸ್ತೆಯಲ್ಲೇ ಬಿಟ್ಟಿದ್ದು ತೆರವುಗೊಳಸದಿರುವ ಕಾರಣ, ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಕಂಡುಬಂದಿದ್ದು, ಅದರಂತೆ, ಸಭೆಗೆ ಹಾಜರಿದ್ದು, ಬಿಡಬ್ಲ್ಯೂಎಸ್ಎಸ್ಬಿ ಕೆಲಸ ಪರಿವೀಕ್ಷಕರಿಗೆ ತಿಳಿಸಿ, ಗುತ್ತಿಗೆದಾರರಿಗೆ ಸದರಿ ಡೆಬ್ರಿಸ್‌ಗಳನ್ನು ತುರ್ತಾಗಿ ತೆರವುಗೊಳಿಸುವಂತೆ ಸೂಚಿಸಲಾಯಿತು.

**6) ಬೆಸ್ಕಾಂ:-**

ವಿದ್ಯುತ್ ಲೈನ್‌ಗಳಿಗೆ ತಡೆಯಾಗಿರುವ ಮರದ ಕೊಂಬೆಗಳನ್ನು ತೆರವುಗೊಳಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ತೆರವುಗೊಳಿಸಿದ ಮರದ ಕೊಂಬೆಗಳನ್ನು ಹತ್ತಿರದಲ್ಲಿ ಗುರುತಿಸಲ್ಪಟ್ಟ ಡಂಪಿಂಗ್ ಯಾರ್ಡ್‌ಗಳಲ್ಲಿ ವಿಲೇವಾರಿ ಮಾಡಲು ಸೂಚಿಸಲಾಯಿತು.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ:37

(ಎನ್. ಜಿ. ಉಮೇಶ್)
ವಾರ್ಡ್ ನೋಡಲ್ ಅಧಿಕಾರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ವಾರ್ಡ್ ಸಂಖ್ಯೆ:37